ಎಲ್ಲಾ ಸೀಟುಗಳೂ ಕಿತ್ತುಹೋಗಿದ್ದು ಇವುಗಳನ್ನು ಬದಲಾಯಿಸಿರುವುದಿಲ್ಲ. ಇದರ ಜೊತೆಗೆ ಈ ಚಿತ್ರಮಂದಿರದಲ್ಲಿ ಹವಾನಿಯಂತ್ರಣ ಸೌಲಭ್ಯವಿಲ್ಲದೆ ಕೇವಲ ಕೆಲವೇ ಫ್ಯಾನುಗಳನ್ನು ಹಾಕಿರುವುದರಿಂದ ಚಲನಚಿತ್ರಮಂದಿರದ ದುರಸ್ತಿ ಕೆಲಸಗಳನ್ನು ಕೈಗೊಳ್ಳಬೇಕೆಂದು ಸನ್ಮಾನ್ಯ ನಗರಾಭಿವೃದ್ಧಿ ಸಚಿವರನ್ನು ಕೋರುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ:- ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ಈ ವಿಚಾರವನ್ನು ಮಾನ್ಯ ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳ ಗಮನಕ್ಕೆ ತಂದು ಮಾನ್ಯ ಸದಸ್ಯರಿಗೆ ಉತ್ತರವನ್ನು ಒದಗಿಸುತ್ತೇನೆ.

(3) ಮೂಡಿಗೆರೆ ತಾಲ್ಲೂಕಿನಲ್ಲಿ ಪಿ. ಹೆಚ್. ಸಿ. ಕಟ್ಟಡಗಳನ್ನು ಆರೋಗ್ಯ ಇಲಾಖೆಗೆ ವಹಿಸುವ ಬಗ್ಗೆ.

ಶ್ರೀಮತಿ ಮೋಟಮ್ಮ(ಮೂಡಿಗೆರೆ):- ಸನ್ಮಾನ್ಯ ಉಪಾಧ್ಯಕ್ಷಣಿಯವರೆ, ಮೂಡಿಗೆರೆ ತಾಲ್ಲೂಕಿನ ಬಿ. ಹೊಸಹಳ್ಳಿ ಹಾಗೂ ದಾಸರಹಳ್ಳಿ ಮಂಡಲದ ಊರು ಬಗೆಯಲ್ಲಿ ಜಿಲ್ಲಾ ಪರಿಷತ್ತಿನಿಂದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡವನ್ನು ಕಟ್ಟಿ ಎರಡು ವರ್ಷವಾದರೂ ಆರೋಗ್ಯ ಇಲಾಖೆಗೆ ವಹಿಸದೆ, ಅನಾಥವಾಗಿ ನಿಂತಿರುವ ಕಟ್ಟಡವನ್ನು ಜನ ನೋಡಿ, ಏನಾಗಿದೆ ಈ ಕಟ್ಟಡಗಳಿಗೆ ಆಸ್ಪತ್ರೆ ಏಕೆ ನಡೆಸುತ್ತಿಲ್ಲ ಅನ್ನುವ ಹಾಗಾಗಿದೆ. ಇನ್ನೂ ಎಷ್ಟು ವರ್ಷಗಳು ಬೇಕು- ಈ ಹೊಸ ಕಟ್ಟಡಗಳಿಗೆ ಪಿ. ಹೆಚ್. ಸಿ. ಷಿಫ್ಟ ಮಾಡಲು? ಈ ಪಿ. ಹೆಚ್. ಸಿ. ಹೊಸ ಕಟ್ಟಡಗಳ ಯಾವುದೇ ಕೆಲಸ ಬಾಕಿ ಇದ್ದರೆ ಅದಕ್ಕೆ ಕಾರಣವೇನು? ಯಾವ ಕಂಟ್ರಾಕ್ಟರ್ ಎಂದು ತಿಳಿದು ಜಿಲ್ಲಾ ಪರಿಷತ್ತಿಗೆ ಕ್ರಮ ತೆಗೆದುಕೊಳ್ಳಲು ತಿಳಿಸಿ ಕೂಡಲೇ ಬಿ. ಹೊಸಹಳ್ಳಿ ಹಾಗೂ ಊರುಬಗೆ ಹೊಸ ಪಿ. ಹೆಚ್. ಸಿ. ಕಟ್ಟಡಗಳನ್ನು ಆರೋಗ್ಯ ಇಲಾಖೆಗೆ ತೆಗೆದುಕೊಂಡು ಆಸ್ಪತ್ರೆ ನಡೆಸಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ(ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಉಪಾಧ್ಯಕ್ಷಣಿಯವರೆ, ತಮ್ಮ ಅನುಮತಿ ಕೋರಿ ಈ ಹೇಳಿಕೆಯನ್ನು ನೀಡ ಬಯಸುತ್ತೇನೆ. ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕು ಬಿ. ಹೊಸಹಳ್ಳಿ ಅಥವಾ ಭಾರತ ಬಯಲು ಎಂಬ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಘಟಕದ ಕಟ್ಟಡದ ಕೆಲಸ ಸುಮಾರು ಒಂದು ವರ್ಷದ ಹಿಂದೆ ಅಂದರೆ, ದಿನಾಂಕ 19-3-1991ರಲ್ಲಿ ಮುಗಿದಿರುತ್ತದೆ. ಆದರೆ ಕಟ್ಟಡಕ್ಕೆ ಇಲ್ಲಿಯವರೆಗೆ ವಿದ್ಯುತ್ ಪೂರೈಕೆ ಮಾಡಿರುವುದಿಲ್ಲ. ಈ ಕಟ್ಟಡವು ಗ್ರಾಮಕ್ಕೆ ಸುಮಾರು ಒಂದು ಕಿಲೋ ಮೀಟರ್ ದೂರದಲ್ಲಿ ಇದ್ದು, ಇದರ ವಿದ್ಯುತ್ ಪೂರೈಕೆಗಾಗಿ ಕರ್ನಾಟಕ ವಿದ್ಯುತ್‌ಚ್ಛಕ್ತಿ ಮಂಡಳಿಗೆ ಹಲವಾರು ಪತ್ರಗಳನ್ನು ಬರೆಯಲಾಗಿದೆ. ಈ ಕಟ್ಟಡಕ್ಕೆ ವಿದ್ಯುತ್ ಪೂರೈಸಲು 5 ವಿದ್ಯುತ್ ಕಂಬಗಳನ್ನು ನೆಡಬೇಕಾಗಿದ್ದು, ಇದಕ್ಕೆ ಹಳ್ಳಿಯ ಕೆಲವು ಜನರು ವಿರೋಧಿಸಿರುತ್ತಾರೆ. ಈ ವಿವಾದ ಬಗೆಹರಿದ ನಂತರ ಕಟ್ಟಡಕ್ಕೆ ವಿದ್ಯುತ್ ಸರಬರಾಜು ಮಾಡಿ, ಕಟ್ಟಡವನ್ನು ಈ ಇಲಾಖೆಯ ವಶಕ್ಕೆ ಕೊಟ್ಟು ಕೂಡಲೇ ಆರೋಗ್ಯ ಘಟಕವನ್ನು ಇಲ್ಲಿಗೆ ಸ್ಥಳಾಂತರಿಸಲಾಗುವುದು.

ಇದೇ ತರಹ ದಾಸರಹಳ್ಳಿ ಮಂಡಲದ ಊರುಬಗೆಯಲ್ಲಿ ಸಹ ಕಟ್ಟಡದ ಕೆಲಸ ಸೆಪ್ಟೆಂಬರ್1991ರಲ್ಲಿ ಮುಗಿದಿರುತ್ತದೆ. ಈ ಕಟ್ಟಡಕ್ಕೂ ಸಹ ವಿದ್ಯುತ್ ಪೂರೈಕೆ ಆಗಿರುವುದಿಲ್ಲ. ಕಟ್ಟಡಕ್ಕೆ ವಿದ್ಯುತ್ ಸರಬರಾಜು ದೊರೆತು ಅದನ್ನು ಇಲಾಖೆಗೆ ವಹಿಸಿಕೊಟ್ಟ ಕೂಡಲೇ ಆರೋಗ್ಯ ಘಟಕವನ್ನು ಅಲ್ಲಿಗೆ ಸ್ಥಳಾಂತರಿಸಲಾಗುವುದು.

(4) ಮಂಗಳೂರು ತಾಲ್ಲೂಕಿನ ಕುಳಾಯಿಯಲ್ಲಿರುವ ನಿರಾಶ್ರಿತ ಮೀನುಗಾರರಿಗೆ ಹಕ್ಕು